ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016–17 : ಏಪ್ರಿಲ್ 28, 2016

# ಹಿರಿಯ ಪತ್ರಕರ್ತ ಎಸ್. ವಿ. ಜಯಶೀಲ ರಾವ್ ಅವರ ನಿಧನಕ್ಕೆ ಮುಖ್ಯಮಂತ್ರಿ ಶೋಕ

ಬೆಂಗಳೂರು, ಏಪ್ರಿಲ್ 28 :

ಹಿರಿಯ ಪತ್ರಕರ್ತ ಎಸ್. ವಿ. ಜಯಶೀಲ ರಾವ್ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಸದಾ ನಗುಮೊಗದ ಜಯಶೀಲ ರಾವ್ ಅವರು ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಪ್ರಜಾವಾಣಿ ಪತ್ರಿಕೆಯ ಮುಖ್ಯ ವರದಿಗಾರರಾಗಿದ್ದರು. ಜಯಶೀಲರಾವ್ ಅವರು ರಾಜ್ಯ ವಿಧಾನ ಮಂಡಲದ ಕಾರ್ಯಕಲಾಪಗಳ ವರದಿಗಾರಿಕೆಯ ಜೊತೆ ಜೊತೆಗೆ ಸಾಕ್ಷಾತ್ ಸಮೀಕ್ಷೆ ಎಂಬ ಶೀರ್ಷಿಕೆಯಲ್ಲಿ ಹೊಸ ಅಂಕಣವನ್ನು ಪ್ರಾರಂಭಿಸಿ, ಹೊಸ ಸಂಚಲನವನ್ನು ಮೂಡಿಸಿದ್ದರು. ಇದೇ ಮಾದರಿಯ ಅಂಕಣವನ್ನು ಇತರೆ ಪತ್ರಿಕೆಗಳೂ ಪ್ರಾರಂಭಿಸಲು ಪ್ರೇರಣೆಯಾಗಿದ್ದರು ಎಂಬುದು ಗಮನಾರ್ಹ.

ನನ್ನೊಡನೆ ಆತ್ಮೀಯ ಒಡನಾಟವನ್ನು ಇರಿಸಿಕೊಂಡಿದ್ದ ಜಯಶೀಲ ರಾವ್ ಅವರು ನಮ್ಮನ್ನಗಲಿರುವುದು ನನ್ನಲ್ಲಿ ಅತ್ಯಂತ ದುಃಖ ಹಾಗೂ ನೋವು ತಂದಿದೆ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಹಾಗೂ ಮುಂಜಾನೆ ಪತ್ರಿಕೆಗಳಲ್ಲಿ ತಮ್ಮ ವೃತ್ತಿ ಚಟುವಟಿಕೆಗಳಲ್ಲಿ ತೊಡಗಿದ್ದ ಜಯಶೀಲರಾವ್ ಅವರು ಎಲ್ಲರೊಡನೆ ಬೆರೆಯುವ ಪ್ರೀತಿ ಹಾಗೂ ವಿಶ್ವಾಸದ ತಮ್ಮ ವಿಶೇಷ ಗುಣದಿಂದ ಪತ್ರಿಕಾ ಸಂಘಟನೆಗಳ ಮುಖಂಡರಾಗಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದರು.

ಹೆಚ್. ಡಿ. ದೇವೇಗೌಡ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ಪತ್ರಿಕಾ ಕಾರ್ಯದರ್ಶಿಯಾಗಿ ಜಯಶೀಲರಾವ್ ಅವರು ಸಲ್ಲಿಸಿದ ಸೇವೆ ಅನನ್ಯ ಎಂದು ಮೂಲಸೌಲಭ್ಯ ಮತ್ತು ಹಜ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಆರ್ ರೋಷನ್ ಬೇಗ್ ಅವರು ತಮ್ಮ ಸಂದೇಶದಲ್ಲಿ ಬಣ್ಣಿಸಿದ್ದಾರೆ.

ಪ್ರತಿಷ್ಠಿತ ಟೀಯೆಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತ ಜಯಶೀಲ ರಾವ್ ಅವರು ಕೇವಲ ಪತ್ರಕರ್ತರಾಗಿ ಮಾತ್ರವಲ್ಲ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಎಲ್ಲಾ ವಾರ್ತಾಧಿಕಾರಿಗಳಿಗೆ ಸ್ಫೂರ್ತಿಯ ಚಿಲುಮೆಯಾಗಿ ಅತ್ಯುತ್ತಮ ಮಾರ್ಗದರ್ಶಕರಾಗಿದ್ದರು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್ ಆರ್ ವಿಶು ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೊಲೀಸ್ ಗೌರವಗಳೊಡನೆ ಅಂತ್ಯ ಸಂಸ್ಕಾರ

ಎಸ್ ವಿ ಜಯಶೀಲ ರಾವ್ ಅವರ ಅಂತ್ಯ ಸಂಸ್ಕಾರವು ಪೊಲೀಸ್ ಗೌರವಗಳೊಂದಿಗೆ ಬೆಂಗಳೂರಿನಲ್ಲಿ ಶುಕ್ರವಾರ ನಡೆಯಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

***********

ಡಿ ಪಿ ಎಂ